## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 06-10-2022

**ಮಾರ್ಕೇಟ ಪೊಲೀಸ್ ಠಾಣೆ 76/2022 ಕಲಂ 279, 337, 304(ಎ) ಐಪಿಸಿ ;-**

ದಿನಾಂಕ 05-10-2022 ರಂದು ರಾತ್ರಿ 2030 ಗಂಟೆಯ ಸುಮಾರಿಗೆ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಯಿಂದ ಓಪಿ ಸಿಎಚಸಿ ರವರು ಒಂದು ಎಂ.ಎಲ್.ಸಿ ಇರುವ ಬಗ್ಗೆ ಮಾಹಿತಿ ತಿಳಿಸಿದ ಮೇರೆಗೆ ಕಿರಣ ಪಿ.ಎಸ್.ಐ (ಕಾ.ಸು) ಮಾರ್ಕೆಟ ಪೊಲೀಸ್ ಠಾಣೆ ಬೀದರ, ಆಸ್ಪತ್ರೆಗೆ ಭೇಟ್ಟಿ ನೀಡಿ ಎಂ.ಎಲ್.ಸಿ ಸ್ವೀಕರಿಸಿಕೊಂಡು ಮೃತ ದಯಾಲ ತಂದೆ ದಿ;ದಯಾನಂದ ಬಂಗ್ಲೆದೊಡ್ಡಿ ವಯ 34 ವರ್ಷ ಜಾತಿ ಕ್ರಿಶ್ಚಿನ ಉ;ಕೂಲಿ ಕೆಲಸ ಸಾ:ಲೇಬರ ಕಾಲೋನಿ ಹೊರ ಶಾಹಗಂಜ ಬೀದರ ಇವರ ಪತ್ನಿಯಾದ ಶ್ರೀಮತಿ ಅಶ್ವಿನಿ ಗಂಡ ದಯಾಲ ಬಂಗ್ಲೆದೊಡ್ಡಿ ವಯ 28 ವರ್ಷ ಜಾತಿ ಕ್ರಿಶ್ಚಿನ ಉ;ಮನೆ ಕೆಲಸ ಸಾ:ಲೇಬರ ಕಾಲೋನಿ ಹೊರ ಶಾಹಗಂಜ ಬೀದರ ರವರು ಅಲ್ಲೆ ಹಾಜರಿದ್ದು ಅವರ ಹೇಳಿಕೆ ಫಿರ್ಯಾದು ಪಡೆಯಲಾಗಿ, ದಿನಾಂಕ 05-10-2022 ರಂದು ಸಾಯಂಕಾಲ 1730 ಗಂಟೆಯ ಸುಮಾರಿಗೆ ಹೊರಗೆ ಹೋಗಿ ಬರುತ್ತೇನೆಂದು ಇವರ ಗಂಡ ಹೇಳಿ ಒಂದು ಪಲ್ಸರ್ ದ್ವಿಚಕ್ರವಾಹನ.ನಂ.ಕೆ.ಎ.38-ಎಲ್-6767 ನೇದರ ಮೇಲೆ ಮನೆಯಿಂದ ಹೋಗಿರುತ್ತಾರೆ. ಬೀದರ ನಗರದ ಮಲ್ಕಾಪೂರ ರಿಂಗ ರೋಡ ಹತ್ತಿರ ದೇವ ದೇವ ವನದ ರಿಂಗ ಕಡೆಯಿಂದ ಒಂದು ಹೊಂಡಾ ಸಿಟಿ ಕಾರ್.ನಂ.ಯು.ಪಿ-14-ಬಿಡಿ-4809 ನೇದರ ಚಾಲಕನು ತನ್ನ ಕಾರನ್ನು ಅತಿವೇಗ ಹಾಗು ನಿಷ್ಕಾಳಜೀತನ ದಿಂದ ಚಲಾಯಿಸಿಕೊಂಡು ಬಂದು ದಯಾಲ ಇವರು ತನ್ನ ಪಲ್ಸರ್ ದ್ವಿಚಕ್ರವಾಹನ ನಂಬರ ಕೆ.ಎ.38-ಎಲ್-7676 ನೇದನ್ನು ಮಲ್ಕಾಪೂರ ಕಡೆಯಿಂದ ಚಲಾಯಿಸಿಕೊಂಡು ರಿಂಗ ರೋಡಿಗೆ ಬಂದಾಗ ಕಾರ ಚಾಲಕನು ದಯಾಲ ರವರ ದ್ವಿಚಕ್ರವಾಹನಕ್ಕೆ ಡಿಕ್ಕಿ ಮಾಡಿದರಿಂದ ದಯಾಲ ಇವರ ಎಡಕಾಲಿನ ಹಿಂಬಡಿಗೆ ಹತ್ತಿ ಕಾಲು ಮುರಿದು ಭಾರಿ ರಕ್ತಗಾಯ, ಬಲಕಾಲಿನ ಮೊಳಕಾಲು ಕಳಗೆ ಹತ್ತಿ ಮುರಿದು ಭಾರಿ ಗುಪ್ತಗಾಯ, ಹೊಟ್ಟೆಯ ಮೇಲೆ ಗುಪ್ತಗಾಯ ಹಾಗು ಎಡಕಿವಿಯ ಹಿಂದೆ ತರಚಿದ ರಕ್ತಗಾಯಗಳಾಗಿ ದಯಾಲ ಇವರು ಸ್ಥಳದಲ್ಲಿಯ ಮೃತಪಟ್ಟಿರುತ್ತಾರೆ. ಅಪಘಾತ ವೆಸಗಿದ್ದ ಕಾರ ಚಾಲಕನ ಹೆಸರು ಶುಭಂ ಸಾ:ಏರಫರ್ೀಸ್ ಬೀದರ ಇವನು ಇದ್ದು, ಈ ಕಾರಿನಲ್ಲಿ ಹಿಂದೆ ಕುಳಿತವರ ಹೆಸರು ಶಿವಮ ಸಾ:ಏರಫರ್ೀಸ್ ಬೀದರ ಹಾಗು ಅಂಕಿತ ಸಾಏರಫರ್ೀಸ್ ಅಂತಾ ಗೋತ್ತಾಗಿದ್ದು, ಈ ,ಮೂವರಿಗೂ ಈ ವಾಹನ ಅಪಘಾತದಲ್ಲಿ ಗಾಯಗಳಾಗಿರುತ್ತವೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 121/2022 ಕಲಂ 32, 34 ಕೆ.ಇ. ಕಾಯ್ದೆ :-

ದಿನಾಂಕ 05/10/2022 ರಂದು ಪಿಎಸ್ಐ ರವರು ಸಿಬ್ಬಂದಿಯೊAದಿಗೆ ದಸರಾ ಹಬ್ಬದ ಬಂದೊಬಸ್ತ ಕರ್ತವ್ಯಕ್ಕೆ ನೇಮಕ ಮಾಡಿದ ಸಿಬ್ಬಂದಿಯವರಿಗೆ ಚೆಕ್ಕ ಮಾಡುತ್ತಾ ರಾಜೇಶ್ವರ ಗ್ರಾಮದಲ್ಲಿ ಹೋದಾಗ ಸಮಯ 18-30 ಗಂಟೆಗೆ ಮಾಹಿತಿ ಬಂದಿದೇನೆAದರೆ ಮಲ್ಲಿಕಾರ್ಜುನವಾಡಿ ಗ್ರಾಮದ ಭವಾನಿ ಮಂದೀರ ಹತ್ತಿರ ಸಾರ್ವಜನಿಕ ಖುಲ್ಲಾ ಜಾಗೆಯಲ್ಲಿ ಒಬ್ಬನು ತನ್ನ ಹತ್ತಿರ ಸರಾಯಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತಿದ್ದಾನೆ. ಅಂತಾ ಮಾಹಿತಿ ಬಂದ ಮೇರೆಗೆ ನೋಡಲು ಭವಾನಿ ಮಂದಿರದ ಹತ್ತಿರ ಗ್ರಾಮದಲ್ಲಿ ಹೋಗುವ ಸಿಸಿ ರೋಡಿನ ಮೇಲೆ ಒಬ್ಬನು ತನ್ನ ಹತ್ತಿರ ಚೀಲದಲ್ಲಿ ಸರಾಯಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದನ್ನು ಖಚಿತ ಪಡಿಸಿಕೊಂಡು ಸದರಿಯವನ ಮೇಲೆ ಸಿಬ್ಬಂದಿಯವರ ಸಹಾಯದಿಂದ ಪಂಚರ ಸಮಕ್ಷಮ 19-30 ಗಂಟೆಗೆ ದಾಳಿ ಮಾಡಿ ಸದರಿಯವನಿಗೆ ಹಿಡಿದು ವಿಚಾರಿಸಲು ತನ್ನ ಹೆಸರು ಅರುಣ ತಂದೆ ಮಾಣಿಕಪ್ಪಾ ತಳಮೊಡ ವಯ:31 ವರ್ಷ ಜಾತಿ:ಲಿಂಗಾಯತ ಉ:ಕೂಲಿಕೆಲಸ ಸಾ:ಯೆರಬಾಗ ಅಂತಾ ತಿಳಿಸಿದನು ಆಗ

ಆತನಿಗೆ ನಿನ್ನ ಹತ್ತಿರ ಸಾರಾಯಿ ಮಾರಾಟ ಮಾಡಲು ಸರ್ಕಾರದಿಂದ ಪಡೆದ ಅನುಮತಿ ಪತ್ರ ಇದೇಯಾ? ಅಂತ ವಿಚಾರಿಸಲು ತನ್ನ ಹತ್ತಿರ ಸರಾಯಿ ಮಾರಾಟ ಮಾಡಲು ಸರ್ಕಾರದಿಂದ ಪಡೆದ ಯಾವುದೇ ಪರವಾನಗಿ ಪತ್ರ ಇರುವುದಿಲ್ಲಾ, ಅಂತಾ ಒಪ್ಪಿಕೊಂಡಿದ್ದರಿAದ ಪಂಚರ ಸಮಕ್ಷಮದಲ್ಲಿ ಆತನ ಹತ್ತಿರ ಇದ್ದ ಚೀಲದಲ್ಲಿ ಪರಿಶೀಲಿಸಿ ನೋಡಲು 1) ಒಂದು ಚೀಲದಲ್ಲಿ ಒರಿಜಿನಲ್ ಚಾಯ್ಸ್ ಒರಿಜಿನಲ್ ಚಾಯ್ಸ್ ವಿಸ್ಕಿ 90 ಎಮ್.ಎಲ್. 33 ಟೆಟ್ರಾ ಪ್ಯಾಕೆಟಗಳು ಒಂದರ ಬೆಲೆ 35 ಒಟ್ಟು 1,155/- ರೂ ಬೆಲೆವುಳ್ಳ ಸರಾಯಿ ಇದ್ದು ಹಾಗೂ ಸರಾಯಿ ಮಾರಾಟದಿಂದ ಬಂದ ನಗದು ಹಣ 350/- ರೂ ಸಿಕ್ಕಿದ್ದು, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.